RNU AIR DHARWAD

# JANUARY 06, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಯುವನಿಧಿ ಯೋಜನೆ; ರಾಜ್ಯದ 1 ಲಕ್ಷದ 62 ಸಾವಿರ, ಉದ್ಯೋಗಾಕಾಂಕ್ಷಿ ಯುವಜನತೆ, ಫಲಾನುಭವಿ.**
- **ಲಿಂಗತ್ವ ಅಲ್ಪಸಂಖ್ಯಾತರೇ ನಿರ್ವಹಿಸುವ, ಮಾದರಿ 'ಅಕ್ಕ ಕೆಫೆ', ಹಾವೇರಿಯಲ್ಲಿ ಸೇವಾರಂಭ.**
- **ಭದ್ರಾ ಅಚ್ಚುಕಟ್ಟು ಪ್ರದೇಶದ, ಎಡದಂಡೆ ನಾಲೆಗೆ, 120 ದಿನಗಳ ಕಾಲ ನಿರಂತರ ನೀರು ಹರಿಸಲು, ಮಂಡಳಿ ತೀರ್ಮಾನ.**
- **ಭಾರತ ಸ್ಕೌಟ್ಸ್ ಮತ್ತು ಗೈಡ್ಸ್; ಕಿತ್ತೂರು ಕರ್ನಾಟಕದ ಪ್ರಥಮ ಜಾಂಬೋರೇಟ್‌ಗೆ, ಧಾರವಾಡದಲ್ಲಿ ಇಂದು ಸಂಜೆ ಚಾಲನೆ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯ ಸರ್ಕಾರದ, ಮಹತ್ವಾಕಾಂಕ್ಷಿ ಪಂಚಖಾತ್ರಿ ಯೋಜನೆಗಳಲ್ಲಿ ಒಂದಾದ, ಯುವನಿಧಿ ಯೋಜನೆಯಡಿ, ಕಳೆದ ನವೆಂಬರ್ ಅಂತ್ಯಕ್ಕೆ, ರಾಜ್ಯದ 1 ಲಕ್ಷದ 62 ಸಾವಿರ ಜನ ಉದ್ಯೋಗಾಕಾಂಕ್ಷಿ ಯುವ ಜನತೆಯ ಖಾತೆಗೆ, ನಿರುದ್ಯೋಗ ಭತ್ಯೆ ಪಾವತಿಸಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ದಾವಣಗೆರೆಯಲ್ಲಿ ಆಯೋಜಿಸಿರುವ, ರಾಜ್ಯ ಮಟ್ಟದ ಯುವಜನೋತ್ಸವಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಯುವಜನತೆಯ ಕೌಶಲಾಭಿವೃದ್ಧಿಗೆ ಒತ್ತು ನೀಡಲಾಗಿದೆ. 213 ಕೋಟಿ ರೂಪಾಯಿ ವಿನಿಯೋಗಿಸಲಾಗಿದೆ. ಪದವಿಧರ ಉದ್ಯೋಗಾಕಾಂಕ್ಷಿಗಳ ನೆರವಿಗಾಗಿ, ಸರ್ಕಾರ ಬದ್ಧತೆಯಿಂದ ಕೆಲಸ ಮಾಡುತ್ತಿದೆ ಎಂದರು. ವೈಜ್ಞಾನಿಕ, ವೈಚಾರಿಕ ಶಿಕ್ಷಣ ಪಡೆದು, ಸಮಾನ ಅವಕಾಶಗಳನ್ನು ಬಳಸಿಕೊಂಡು ಮುನ್ನಡೆಯುವ ಪ್ರತಿಭಾವಂತರು, ಸಮಾಜದ ಪ್ರಗತಿಗೆ ಕಾರಣರಾಗುತ್ತಾರೆ ಎಂದು ಮುಖ್ಯಮಂತ್ರಿ ನುಡಿದರು.**

<><><>

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿ 'ನ್ ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ, ಸಂಜೀವಿನಿ ಅಡಿ, ಹಾವೇರಿಯ ದೇವಗಿರಿ ಗ್ರಾಮದ ಜಿಲ್ಲಾ ಪಂಚಾಯ್ತಿ ಕಟ್ಟಡದಲ್ಲಿ, ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರೇ ನಿರ್ವಹಿಸುವ, 'ಅಕ್ಕ ಕೆಫೆ' ಕಾರ್ಯಾರಂಭಿಸಿದೆ. ಸಾವಿತ್ರಿಬಾಯಿ ಫುಲೆ ಲಿಂಗತ್ವ ಅಲ್ಪಸಂಖ್ಯಾತರ ಸ್ವ ಸಹಾಯ ಸಂಘದ ಅಧ್ಯಕ್ಷೆ ಕೆ.ಪಿ. ಅಕ್ಷತಾ ಅವರು, ಅಕ್ಕ ಕೆಫೆಯ ನೇತೃತ್ವ ವಹಿಸಿದ್ದಾರೆ.

<><><>

ಧಾರವಾಡ ಆಕಾಶವಾಣಿಯ ಪ್ರಾದೇಶಿಕ ಸುದ್ದಿ ವಿಭಾಗದ, ಸಂಪಾದಕೀಯ ಕಾರ್ಯನಿರ್ವಾಹಕ ವಿವೇಕ ಆದಿತ್ಯ, 'ಅಕ್ಕ ಕೆಫೆ' ಬಗ್ಗೆ ಮಾಹಿತಿ ನೀಡಿದ್ದಾರೆ.

<><><>

*ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರೇ, ನಿರ್ವಹಿಸುವ ಮಾದರಿ ಹಾಗೂ ರಾಜ್ಯದ ಪ್ರಥಮ ಅಕ್ಕ ಕೆಫೆ ಇದಾಗಿದೆ. ಅಡುಗೆಯಿಂದ, ಸ್ವಚ್ಛತೆ ವರೆಗೆ ಎಲ್ಲ ಕೆಲಸಗಳನ್ನು, 20 ಜನ ಲಿಂಗತ್ವ ಅಲ್ಪಸಂಖ್ಯಾತರು ವಹಿಸಿಕೊಂಡು, ಗಮನ ಸೆಳೆದಿದ್ದಾರೆ.*

*ರಾಜ್ಯದ ಮಾದರಿ 'ಅಕ್ಕ ಕೆಫೆ' ತೃತೀಯ ಲಿಂಗಿಗಳ ಆತ್ಮ ಗೌರವ ಮತ್ತು ಸ್ವಾಭಿಮಾನವನ್ನು ಪ್ರದರ್ಶಿಸಿದೆ. ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಅಕ್ಷಯ ಶ್ರೀಧರ ಅವರ ಪ್ರಕಾರ, ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ ಅನುಕಂಪವಲ್ಲ; ಅವಕಾಶಗಳನ್ನು ನೀಡಿದಲ್ಲಿ, ಅವರ ಪ್ರತಿ ಸಮಾಜದಲ್ಲಿರುವ ದೃಷ್ಟಿಕೋನವನ್ನು ಬದಲಿಸಬಹುದು.*

*ಅಕ್ಕ ಕೆಫೆ ಚುಕ್ಕಾಣಿ ಹಿಡಿದಿರುವ ಕೆ.ಪಿ. ಅಕ್ಷತಾ ತಮ್ಮ ಅನಿಸಿಕೆ ಹಂಚಿಕೊಂಡಿದ್ದು, ಹೀಗೆ..*

<><><>

ವಿವೇಕ ಧ್ವನಿ 40 ಸೆಕೆಂದುಗಳು + ಕೆ.ಪಿ. ಅಕ್ಷತಾ ಧ್ವನಿ 62 ಸೆಕೆಂದುಗಳು

<><><>

ಡೆಪ್ಯೂಟಿ ಚನ್ನಬಸಪ್ಪನವರು, ಕನ್ನಡದಲ್ಲಿ ಬೋಧಿಸಲು, ಕನ್ನಡ ಪಂಡಿತರಿಂದ ಪಠ್ಯ ಪೂರಕ ಸಾಮಗ್ರಿ ತಯಾರಿಸಿ, ಪ್ರಾಥಮಿಕ ಶಾಲೆಗಳಿಗೆ ಪೂರೈಸಿ, ಕನ್ನಡ ಕಲಿಕೆಗೆ ಭದ್ರ ಬುನಾದಿ ಹಾಕಿದರು ಎಂದು, ಶಾಲಾ ಶಿಕ್ಷಣ ಇಲಾಖೆಯ ಬೆಳಗಾವಿ ವಿಭಾಗದ ಅಪರ ಆಯುಕ್ತರಾದ ಜಯಶ್ರೀ ಶಿಂತ್ರಿ ಹೇಳಿದ್ದಾರೆ. ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ, ಶಾಲಾ ಶಿಕ್ಷಣ ಸಂಕಥನ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು, ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಕಲ್ಲಚ್ಚಿನಲ್ಲಿ, 1865ರಲ್ಲಿ 'ಮಠ ಪತ್ರಿಕೆ' ಆರಂಭಿಸಿ, ಕನ್ನಡ ಭಾಷೆ ಬೋಧನೆ ಮತ್ತು ಕಲಿಕೆಗೆ ಡೆಪ್ಯುಟಿ ಚನ್ನಬಸಪ್ಪ ಒತ್ತು ನೀಡಿದರು, ಎಂದರು. ಧಾರವಾಡ ಭಾರತೀಯ ತಂತ್ರಜ್ಞಾನ ಸಂಸ್ಥೆ ಡೀನ್ ಎಸ್.ಎಂ ಶಿವಪ್ರಸಾದ್ ಸಂಕಥನ ಪುಸ್ತಕ ಲೋಕಾರ್ಪಣೆ ಗೊಳಿಸಿದರು. ಗದಗ–ಡಂಬಳದ, ತೋಂಟದಾರ್ಯ ಮಠದ ಶ್ರೀ ಸಿದ್ಧರಾಮ ಸ್ವಾಮೀಜಿ, ಸಾನಿಧ್ಯವಹಿಸಿದ್ದರು.

<><><>

ಚಿಕ್ಕಮಗಳೂರು ಜಿಲ್ಲೆ, ಮುಳ್ಳಯ್ಯನಗಿರಿ ಪರ್ವತ ಶ್ರೇಣಿಯಲ್ಲಿ, ಪ್ಲಾಸ್ಟಿಕ್ ವಸ್ತುಗಳ ಬಳಕೆ ಹಾಗೂ ಮಾರಾಟವನ್ನು ಸಂಪೂರ್ಣ ನಿಷೇಧಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಮೀನಾ ನಾಗರಾಜ್ ತಿಳಿಸಿದ್ದಾರೆ. ಪ್ರವಾಸಿಗರು ಪ್ಲಾಸ್ಟಿಕ್ ನೀರಿನ ಬಾಟಲಿ, ಆಹಾರ ಪೊಟ್ಟಣಗಳನ್ನು ಬಳಸಿ, ಅಲ್ಲಲ್ಲಿ ಬಿಸಾಡುವುದು ಕಂಡುಬಂದಿದೆ. ಆದೇಶ ಉಲ್ಲಂಘಿಸಿದಲ್ಲಿ ಕಠಿಣ ಕ್ರಮ ಜರುಗಿಸಲಾಗುವುದು ಎಂದು, ಅವರು ಎಚ್ಚರಿಸಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಶಿವಮೊಗ್ಗದ, ಭದ್ರಾ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ವ್ಯಾಪ್ತಿಯ, ಭದ್ರಾ ಎಡದಂಡೆ ನಾಲೆಯ ಮೂಲಕ, ಕೂಡಲೇ 120 ದಿನಗಳ ಕಾಲ ನೀರು ಹರಿಸಲು, ಮಂಡಳಿ ನಿರ್ಣಯಿಸಿದೆ ಎಂದು, ಅಧ್ಯಕ್ಷ ಅಂಶುಮಂತ್ ತಿಳಿಸಿದ್ದಾರೆ. ಭದ್ರಾ ನೀರಾವರಿ ಸಲಹಾ ಸಮಿತಿ ಅಧ್ಯಕ್ಷ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರ ಅಧ್ಯಕ್ಷತೆಯಲ್ಲಿ, 86ನೇ ನೀರಾವರಿ ಸಲಹಾ ಸಮಿತಿ ಸಭೆ ಶಿವಮೊಗ್ಗದಲ್ಲಿ ನಡೆಯಿತು. ಚಿಕ್ಕಮಗಳೂರು ಹಾಗೂ ದಾವಣಗೆರೆ ಜಿಲ್ಲೆಗಳ ರೈತರು, ಯಾವುದೇ ವದಂತಿಗಳಿಗೆ ಕಿವಿಗೊಡದೆ, ಆತಂಕಕ್ಕೆ ಒಳಗಾಗದಂತೆ, ಸಚಿವರು ಮನವಿ ಮಾಡಿದರು. ಪ್ರಸ್ತುತ ಜಲಾಶಯದಲ್ಲಿ 66 ದಶಾಂಶ 9-6 ಟಿ.ಎಂ.ಸಿ. ನೀರು ಲಭ್ಯವಿದೆ. ಮುಂದಿನ 120 ದಿನಗಳ ಅವಧಿಯಲ್ಲಿ 32 ಟಿ.ಎಂ.ಸಿ. ಅಡಿ ನೀರು ಹರಿಸಲಾಗುವುದು. ರೈತರು ನೀರಿನ ಹಿತಮಿತ ಸದ್ಬಳಕೆಗೆ ಆದ್ಯತೆ ನೀಡುವಂತೆ, ಮಧು ಬಂಗಾರಪ್ಪ ಮನವಿ ಮಾಡಿದರು.

<><><>

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಧಾರವಾಡ ಜಿಲ್ಲಾ ಘಟಕದಿಂದ, ಪ್ರಥಮ ಕಿತ್ತೂರು ಕರ್ನಾಟಕ ಜಾಂಬೋರೇಟ್‌ನ್ನು, ಇಂದಿನಿಂದ ಐದು ದಿನಗಳ ಕಾಲ, ಧಾರವಾಡ ತಾಲೂಕು ದಡ್ಡಿ ಕಮಲಾಪುರದ 'ಸಸ್ಯ ಚೇತನ' ದಲ್ಲಿ ಆಯೋಜಿಸಲಾಗಿದೆ. ಸಾವಿರದ ಐನೂರಕ್ಕೂ ಹೆಚ್ಚು, ಸ್ಕೌಟ್ಸ್ ಮತ್ತು ಗೈಡ್ಸ್ ಸ್ವಯಂಸೇವಕರು ಪಾಲ್ಗೊಳ್ಳಲಿದ್ದು, ಇಂದು ಸಂಜೆ 4 ಗಂಟೆಗೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋ ' ಲಾಡ್ ಅವರು ಜಾಂಬೋರೇಟ್ ಉದ್ಘಾಟಿಸಲಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿಧಾನ ಪರಿ 'ತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಅಥಿತಿಗಳಾಗಿ, ಪಾಲ್ಗೊಳ್ಳುವರು. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ. ಆರ್. ಸಿಂಧ್ಯ ಅಧ್ಯಕ್ಷತೆ ವಹಿಸುವರು.

<><><>

ಧಾರವಾಡ ಜಿಲ್ಲೆ ಅಳ್ನಾವರ ತಾಲೂಕು ಬೆಣಚಿ ಗ್ರಾಮದ, ಸರ್ಕಾರಿ ಪ್ರೌಢ ಶಾಲೆಯಲ್ಲಿ, ಗ್ರಾಮೀಣ ಸಮುದಾಯಗಳಿಗೆ ಸಮಾನ ಶಿಕ್ಷಣ ಪ್ರಕಲ್ಪದಡಿ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ, ಶಾಲಾ ಮಕ್ಕಳಿಗಾಗಿ ಕೌಶಲ ಪ್ರಯೋಗಾಲಯ ಸ್ಥಾಪಿಸಲಾಗಿದೆ. 3 ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ, ಕೃಷಿ, ಬಡಿಗತನ ಹಾಗೂ ನಳ ರಿಪೇರಿ ಸಂಬಂಧಿ ಕೌಶಲ ಪ್ರಯೋಗಾಲಯ ಕಾರ್ಯನಿರ್ವಹಿಸುತ್ತಿದೆ. ಪ್ರದೇಶ ಸಮಾಚಾರಕ್ಕಾಗಿ, ವೃತ್ತಿ ತರಬೇತಿ ಕೌಶಲ ಪ್ರಯೋಗಾಲಯದ ಸಂಯೋಜಕ, ರಘೋತ್ತಮ ಜೋಶಿ ಮಾಹಿತಿ ನೀಡಿದ್ದಾರೆ.

<><><>

ರಘೋತ್ತಮ ಜೋಶಿ ಧ್ವನಿ 50 ಸೆಕೆಂದುಗಳು

<><><>

ಕೇಂದ್ರ ಸಾಹಿತ್ಯ ಅಕಾದೆಮಿ, ಪಂಪ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ, ನಾರ್ಬರ್ಟ್ ಡಿಸೋಜ, ವಯೋಸಹಜ ಕಾಯಿಲೆಯಿಂದ, ಮಂಗಳೂರಿನಲ್ಲಿ ನಿನ್ನೆ ನಿಧನರಾದರು. ಅವರಿಗೆ 87 ವರ್ಷ ವಯಸ್ಸಾಗಿತ್ತು. ಮಡಿಕೇರಿಯಲ್ಲಿ ಜರುಗಿದ, 80ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಗೌರವಾಧ್ಯಕ್ಷತೆಯನ್ನು, ನಾ. ಡಿಸೋಜ ವಹಿಸಿದ್ದರು. ಅವರ ಹುಟ್ಟೂರು ಸಾಗರದ, ನೆಹರೂ ನಗರದ 2ನೇ ಕ್ರಾಸ್‌ನ ಸ್ವಗೃಹದಲ್ಲಿ, ಇಂದು ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ನಾಳೆ ಸಂಜೆ 4 ಗಂಟೆಗೆ, ಸಾಗರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ, ಸುಪುತ್ರ ನವೀನ್ ಡಿಸೋಜ ಮಾಹಿತಿ ನೀಡಿದ್ದಾರೆ. ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಗುರು ಗೋಬಿಂದಸಿಂಗ್ ಅವರ ಜಯಂತಿಯನ್ನು, ಇಂದು ಶ್ರದ್ಧಾ ಭಕ್ತಿಯಿಂದ, ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಸಿಖ್ಖರ 10ನೇ ಧರ್ಮ ಗುರುಗಳಾದ, ಗೋಬಿಂದ ಸಿಂಗ್‌ರು, ಖಾಲ್ಸಾ ಪಂಥವನ್ನು ಹುಟ್ಟು ಹಾಕಿ, ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಸ್ವಾರ್ಥರಹಿತ ಸೇವೆಯನ್ನು ಪ್ರತಿಪಾದಿಸಿದರು. ಇಂದು ಗುರುಗಳ ಸಂಸ್ಮರಣೆಯಲ್ಲಿ ಅಖಂಡ ಪಾಠ, ಕೀರ್ತನೆ ಹಾಗೂ ಲಂಗರ್‌ಗಳಲ್ಲಿ ಪ್ರಸಾದ ವಿತರಣೆ, ದೇಶಾದ್ಯಂತ ಸಿಖ್ ಬಾಂಧವರು ಗುರುದ್ವಾರಾಗಳಲ್ಲಿ ಆಯೋಜಿಸಿದ್ದಾರೆ.

<><><>

ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ, 2025ರ ಗವಿಶ್ರೀ ಕ್ರೀಡಾ ಉತ್ಸವ, ಇದೇ 12 ರಿಂದ 18ರ ವರೆಗೆ ನಡೆಯಲಿದೆ ಎಂದು, ಸಂಸದ ಕೆ.ರಾಜಶೇಖರ ಹಿಟ್ನಾಳ ತಿಳಿಸಿದ್ದಾರೆ.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕು, ಘಾಟಿ ಕ್ಷೇತ್ರದಲ್ಲಿ ಶ್ರೀ ಸುಬ್ರಹ್ಮಣ್ಯಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

<><><>

ನಾಡೋಜ ಬರಗೂರು ರಾಮಚಂದ್ರಪ್ಪ ಸ್ನೇಹ ಬಳಗ, ತುಮಕೂರಿನಲ್ಲಿ ಬರಗೂರು ಸಾಹಿತ್ಯ ಮಿಮಾಂಸೆ ಹಾಗೂ ತವರು ಜಿಲ್ಲೆಯ ಗೌರವಾರ್ಪಣೆ ಆಯೋಜಿಸಿತ್ತು.

<><><>

ಚೀನಾದಲ್ಲಿ ಉಲ್ಬಣಿಸಿರುವ, ಎಚ್.ಎಂ.ಪಿ ವೈರಾಣು ಹರಡುವಿಕೆಯ ಮೇಲೆ, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ – ಐ.ಸಿ.ಎಂ.ಆರ್. ಕಣ್ಗಾವಲಿರಿಸಿದೆ ಎಂದು, ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

<><><>

ವಿದ್ಯಾ ವಾಚಸ್ಪತಿ ಪಂಚಾಕ್ಷರಿ ಹಿರೇಮಠ ಅವರ, 92ನೇ ಜನ್ಮ ದಿನಾಚರಣೆ ದತ್ತಿ ಅಂಗವಾಗಿ, ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘ, ಇಂದು ಸಂಜೆ 6 ಗಂಟೆಗೆ, ದತ್ತಿ ಉಪನ್ಯಾಸ ಆಯೋಜಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಯುವನಿಧಿ ಯೋಜನೆ; ರಾಜ್ಯದ 1 ಲಕ್ಷದ 62 ಸಾವಿರ, ಉದ್ಯೋಗಾಕಾಂಕ್ಷಿ ಯುವಜನತೆ, ಫಲಾನುಭವಿ.
- ಲಿಂಗತ್ವ ಅಲ್ಪಸಂಖ್ಯಾತರೇ ನಿರ್ವಹಿಸುವ, ಮಾದರಿ 'ಅಕ್ಕ ಕೆಫೆ', ಹಾವೇರಿಯಲ್ಲಿ ಸೇವಾರಂಭ.
- ಭದ್ರಾ ಅಚ್ಚುಕಟ್ಟು ಪ್ರದೇಶದ, ಎಡದಂಡೆ ನಾಲೆಗೆ, 120 ದಿನಗಳ ಕಾಲ ನಿರಂತರ ನೀರು ಹರಿಸಲು, ಮಂಡಳಿ ತೀರ್ಮಾನ.

- ಭಾರತ ಸ್ಕೌಟ್ಸ್ ಮತ್ತು ಗೈಡ್ಸ್; ಕಿತ್ತೂರು ಕರ್ನಾಟಕದ ಪ್ರಥಮ ಜಾಂಬೋರೇಟ್‌ಗೆ, ಧಾರವಾಡದಲ್ಲಿ ಇಂದು ಸಂಜೆ ಚಾಲನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>